# ಸುಂದರ ಗ್ರಂಥದ ಸುತ್ತ ಮುತ್ತ

ಸಿದ್ಧರಾಮಯ್ಯ

ಪುಸ್ತಕವನ್ನು ಓದುವ ಹವ್ಯಾಸ ಶ್ಲಾಘನೀಯವೇ ಆದರೂ ಓದಿದ ಸದ್ಗ್ರಂಥಗಳನ್ನು ಇತರರಿಗೆ ಪರಿಚಯಿಸುವುದು ಮತ್ತೂ ಉತ್ತಮ. ಬೆಳಕನ್ನು ಮನೆಯಿಂದ, ಮನದಿಂದ ಹೊರಕ್ಕೆ ತಂದು ಲೋಕವನ್ನು ಬೆಳಗಬೇಕು. ಇಂತಹ ಕಾರ್ಯವನ್ನು ಮಾಡಿರುವ ಲೇಖಕರು ಶಿಕ್ಷಣ ಇಲಾಖೆಯ ನಿವೃತ್ತ ಡಿ.ಡಿ.ಪಿ.ಐ. ಹಾಗೂ ಮಂಡ್ಯ ತಾಲ್ಲೂಕಿನ ನಿವಾಸಿಗಳು.

ನನಗೆ ದೊರೆತ ಒಂದು ಅಪೂರ್ವ ಗ್ರಂಥ **ಷಟ್‌ಸ್ಥಲ ಜ್ಞಾನ ಸಾರಾಮೃತ**. ಇದು ೭೦೧ ವಚನಗಳನ್ನೊಳಗೊಂಡ ಸರಳ ಕನ್ನಡ ಭಾಷೆಯಲ್ಲಿರುವ ವೀರಶೈವಸಿದ್ಧಾಂತ ಗ್ರಂಥ. ಅಚ್ಚ ಕನ್ನಡದಲ್ಲಿ ಈ ಬೃಹತ್ ಕೃತಿಯನ್ನು ರಚಿಸಿದವರು ಶಿವನ ಅಪರಾವತಾರ ದೇಶಿಕ ಜಗದ್ಗುರು ತೋಂಟದ ಸಿದ್ಧಲಿಂಗೇಶ್ವರರು. ಶ್ರೀಗಳು ೧೨ ವರ್ಷಗಳ ಕಾಲ ಯೋಗಸಮಾಧಿಯಲ್ಲಿದ್ದು ಅವರ ಸುತ್ತ ಹುತ್ತ ಬೆಳೆಯಿತು. ಅನಂತರ ಒಂದು ಹಸು ಆ ಹುತ್ತದ ಮೇಲೆ ನಿತ್ಯ ಹಾಲು ಕರೆಯುತ್ತಿರಲು ಹಸುವಿನ ಮಾಲೀಕ ನೆಂಬಣ್ಣನು ಅದನ್ನು ಪರೀಕ್ಷಿಸಲು ಹೋದಾಗ 'ನೀನು ಬಿನ್ನಹ ಒಪ್ಪಿಸಿದ್ದ ಗುರು ಇಲ್ಲೇ ಇದ್ದಾರೆ' ಎಂದು ಅಶರೀರವಾಣಿ ಕೇಳಿಬಂತು. ಆ ಹುತ್ತಕ್ಕೆ ಹಾಲು ತುಂಬಿದ ನೂರಾರು ಕೊಡಗಳಿಂದ ಕ್ಷೀರಾಭಿಷೇಕ ಮಾಡಲು, ಗುರುಗಳು ಗೋಚರಿಸಿ ನೆಂಬಣ್ಣನ ಮನೆಗೆ ಬಿಜಯಂಗೈದು, ಅವನು ಒಪ್ಪಿಸಿದ್ದ ಬಿನ್ನಹವನ್ನು ಪೂರ್ತಿಮಾಡುತ್ತಾರೆ. ಈ ಸಂಗತಿ ಹೇರಂಬ ಕವಿಯ 'ಶ್ರೀ ಸಿದ್ಧಲಿಂಗ ಶಿವಯೋಗಿಗಳ ಸಾಂಗತ್ಯ ಪುರಾಣ' ದಲ್ಲಿ ಸವಿಸ್ತಾರವಾಗಿ ನಿರೂಪಿತವಾಗಿದೆ. ಶ್ರೀಗಳವರ ಕಾಲ ೧೫ನೇ ಶತಮಾನ. ಆಗ ಉತ್ತರ ಭಾರತ ಮಹಮ್ಮದೀಯರ ಆಳ್ವಿಕೆಯಲ್ಲಿತ್ತು. ಈ ಗ್ರಂಥವು ಲಿಂಗಾಂಗ ಸಾಮರಸ್ಯವನ್ನು ಪ್ರತಿಪಾದಿಸುವ ಕನ್ನಡ ಭಾಷೆಯ ಏಕೈಕ ಕೃತಿ.

ವೀರಶೈವ ಧರ್ಮ ಬಹಳ ಪ್ರಾಚೀನವಾದರೂ ಅದು ಒಂದು ಮೂರ್ತ ಸ್ವರೂಪವನ್ನು ಪಡೆದುಕೊಂಡುದು ಬಸವಾದಿ ಪ್ರಮಥರ ಕಾಲದಲ್ಲಿ. ಆ ಕಾಲವನ್ನು ಈ ಸಿದ್ಧಾಂತದ ಪರ್ವ ಕಾಲವೆನ್ನಬಹುದು. ಇದೇ ಧರ್ಮವನ್ನು ತಿಳಿಸುವ ಮತ್ತೊಂದು ಗ್ರಂಥವೆಂದರೆ ಸಂಸ್ಕೃತ ಭಾಷೆಯಲ್ಲಿರುವ 'ಸಿದ್ಧಾಂತ ಶಿಖಾಮಣಿ'. ಈ ಗ್ರಂಥಕ್ಕೆ ಈ ಧರ್ಮದ ಪಂಚಪೀಠಗಳಲ್ಲಿ ಒಂದಾದ ಇಂದಿನ ಕಾಶೀ ಪೀಠದ ಜಗದ್ಗುರುಗಳು ಹಾಗು ಜಚನಿ ಎಂದೇ ಪ್ರಸಿದ್ಧರಾದ ನಿಡುಮಾಮಿಡಿ ಸೂರ್ಯಸಿಂಹಾಸನದ ಹಿಂದಿನ ಪೀಠಾಧಿಕಾರಿಗಳು ಕನ್ನಡದಲ್ಲಿ ವ್ಯಾಖ್ಯಾನವನ್ನು ಬರೆದಿರುತ್ತಾರೆ. ವೀರಶೈವ ಎಂದರೆ ಅಷ್ಟಾವರಣಗಳಿಂದ ಅಲಂಕರಿಸಿಕೊಂಡು (ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ) ಪಂಚಾಚಾರಗಳನ್ನು ಆಚರಿಸಿ (ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ) ಷಟ್‌ಸ್ಥಲಗಳನ್ನು (ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ) ಏರಿ ಪರಮಾತ್ಮನಲ್ಲಿ ಒಂದಾಗುವುದು. ಇದಕ್ಕೆ ಏಕೋತ್ತರ ಶತಸ್ಥಲ ಸಿದ್ಧಾಂತವೆಂತಲೂ ಕರೆದಿದ್ದಾರೆ. ಆದರೆ, ಗುರು ರೇಣುಕ–ಅಗಸ್ತ್ಯರ ಸಂವಾದ ರೂಪದಲ್ಲಿರುವ ಈ 'ಸಿದ್ಧಾಂತ ಶಿಖಾಮಣಿ'ಯನ್ನು ಬಸವಾದಿ ಪ್ರಮಥರು ಎಲ್ಲಿಯೂ ಪ್ರಸ್ತಾಪ ಮಾಡದೆ ಇರುವುದು ಆಶ್ಚರ್ಯಕರ. ಒಟ್ಟಿನಲ್ಲಿ ಈ ಧರ್ಮಕ್ಕೆ ಕನ್ನಡದಲ್ಲಿ ಒಂದು ಕ್ರಿಯಾಸಂಹಿತೆಯನ್ನು ಅನುಗ್ರಹಿಸಿದವರು ಸಿದ್ಧಲಿಂಗ ಯತಿಗಳೇ ಎಂಬುದರಲ್ಲಿ ಎರಡು ಮಾತಿಲ್ಲ.

ಶ್ರೀಗಳು 'ಸಾರಾಮೃತ' ದಲ್ಲಿ ಲಿಂಗಾಂಗ ಸಾಮರಸ್ಯದ ಭಕ್ತಿ ಜ್ಞಾನ ಕ್ರಿಯೆ ಆಚರಣೆಗಳನ್ನು ಎಳೆ ಎಳೆಯಾಗಿ ಶಿಷ್ಯರಿಗೆ ಉಪದೇಶಿಸಿದ್ದಾರೆ. ಇವರು ಬಳಸಿರುವ ಭಾಷೆ ನೇರ, ಸರಳ, ಸುಂದರವಾಗಿದ್ದು ಶ್ರೀಸಾಮಾನ್ಯನಿಗೂ ಅರ್ಥವಾಗುವಂತಿದೆ. ಇತರ ಶಿವಶರಣ ವಚನಕಾರರಂತೆ ಶ್ರೀಗಳೂ ಸಹ ಅನೇಕ ಬೆಡಗಿನ ವಚನಗಳನ್ನು ಬರೆದಿದ್ದಾರೆ. ಬಹುಶಃ ಅವು ಸಾಧನೆಯಲ್ಲಿ ಮುಂದುವರಿದ ಶಿಷ್ಯರ ಜ್ಞಾನಮಟ್ಟವನ್ನು ಅಳೆಯುವುದಕ್ಕೆ ರಚಿತವಾಗಿರಬಹುದು. ಇವರ ಅನೇಕ ವಚನಗಳಲ್ಲಿ ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ ಅದ್ವೈತ ತತ್ವವನ್ನು ಹೋಲುವಂತಹ ವಿಚಾರಧಾರೆಯನ್ನು ಕಾಣಬಹುದಾಗಿದೆ. ಶ್ರೀಗಳು ಮುಂದುವರಿದು, ಪತಂಜಲಿ ಮಹರ್ಷಿಯ ಅಷ್ಟಾಂಗಯೋಗವನ್ನು ವಚನಸಂಖ್ಯೆ ೩೬೪ರಲ್ಲಿ ಪ್ರತಿಪಾದಿಸಿ, ಈ ಯೋಗವನ್ನು ಲಿಂಗಾಂಗ ಸಾಮರಸ್ಯದೊಡನೆ ಸಮೀಕರಿಸಿದ್ದಾರೆ. ಈ ಹೊತ್ತಿಗೆಯಲ್ಲಿರುವ ಪ್ರತಿಯೊಂದು ವಚನವೂ ಮುಖ್ಯವೆ. ಎಲ್ಲ ೭೦೧ ವಚನಗಳೂ ಸಹ ನೆಟ್ಟ ಕಲ್ಲಿನಲ್ಲಿ ಕೆತ್ತಿದ ಶಿವನ ಶಾಸನದಂತಿವೆ. ಈ ಪುಸ್ತಕ ಶರಣಧರ್ಮದ ಪ್ರಾಥಮಿಕ ಪುಸ್ತಕ, ಪಠ್ಯಪುಸ್ತಕ, ಆಧಾರಗ್ರಂಥ ಹಾಗೂ ಧರ್ಮಸಂಹಿತೆ ಸಹ ಆಗಿರುತ್ತದೆ.

ಶ್ರೀಗಳು ಅವತರಿಸಿ ಈ ಗ್ರಂಥ ರಚಿಸದಿದ್ದರೆ ದಕ್ಷಿಣ ಭಾರತದಲ್ಲಿ ಈ ಪಂಥ ಸಂಪೂರ್ಣವಾಗಿ ನಾಶವಾಗಿ ಹೋಗುತ್ತಿತ್ತು ಎಂಬುದು ನನ್ನ ಅನಿಸಿಕೆ. ಅಂದಿನವರೆಗೆ ಈ ಪಂಗಡಕ್ಕೆ ಒಂದು ಆಧಾರಗ್ರಂಥ ಅಥವಾ ಕ್ರಿಯಾಚಾರ ಸಂಹಿತೆ ಇರದಿರುವುದನ್ನು ಮನಗಂಡು ಶ್ರೀಗಳು ಈ ಗ್ರಂಥರಚನೆಗೆ ಕೈಹಾಕಿರಬೇಕು. ಆ ಕಾಲಕ್ಕೆ ಇಂಥ ಗ್ರಂಥವೊಂದು ಇದ್ದ ಪಕ್ಷದಲ್ಲಿ ಮತ್ತೊಂದು ಗ್ರಂಥ ರಚಿಸಿ ತಮ್ಮ ಅಮೂಲ್ಯ ವೇಳೆಯನ್ನು ಹಾಳುಮಾಡಿಕೊಳ್ಳುತ್ತಿರಲಿಲ್ಲ. ಸಂಸ್ಕೃತಭಾಷೆಯಲ್ಲಿ ಪ್ರಭುತ್ವವನ್ನು ಹೊಂದಿದ್ದ ಶ್ರೀಗಳು ಎಲ್ಲಿಯೂ ಸಹ ತಮ್ಮ ಉಪದೇಶಾಮೃತದಲ್ಲಿ 'ಸಿದ್ಧಾಂತ ಶಿಖಾಮಣಿ'ಯ ಹೆಸರನ್ನು ಪ್ರಸ್ತಾಪಿಸಿಲ್ಲವಾದ್ದರಿಂದ ಆ ಪುಸ್ತಕದ ಕಾಲ ನಿಗೂಢವಾಗಿಯೇ ಉಳಿಯು

ತ್ತದೆ. ವಚನ ಸಂಹಿತೆ ೧೭೮ರಲ್ಲಿ ಲಿಂಗಾಂಗ ಸಾಮರಸ್ಯಕ್ಕೆ ಪರಮ ವೀರಶೈವಾಗಮವೇ ಪ್ರಮಾಣ. ಪುರಾತರ ಮಹಾವಾಕ್ಯವೇ ಪ್ರಮಾಣ ಎಂದು ಹೇಳಿ ಶಿವನನ್ನೇ ಸಾಕ್ಷಿಯಾಗಿ ಮಾಡಿದ್ದಾರೆ. ಮತ್ತೆ, ವಚನ ೬೭ರಲ್ಲಿ "ಆದಿಯಲಿ ಶಿವತತ್ವದಲ್ಲಿ ರೇಣುಕ ಉದಯವಾಗಿರ್ದೊಡೆ ಇಲ್ಲಿ ಶಿವಲಿಂಗದಲ್ಲಿ (ಸ್ಥಾವರ) ಉದಯವಾದ ಪರಿಯೆಂತೋ" ಎಂದು ಹೇಳಿರುವುದರಿಂದ ಭೂಮಂಡಲದ ಮೇಲೆ ಇಷ್ಟಲಿಂಗತತ್ವದ ಬೀಜವನ್ನು ಬಿತ್ತಿದವರು ಗುರು ರೇಣುಕರು ಎಂಬುದು ನಿರ್ವಿವಾದ. ಆದರೆ ಅವರು ಹೇಳಿರುವ 'ಆದಿ' ಎನ್ನುವುದು ಕೃತ, ತ್ರೇತಾ, ದ್ವಾಪರ, ಕಲಿಗಳಲ್ಲಿ ಯಾವ ಯುಗದ ಆದಿ ಎಂಬುದು ಊಹಿಸಲು ಅಸಾಧ್ಯ.

ವೀರಶೈವ ಧರ್ಮದ ಮೂರು ಪ್ರಮುಖ ತತ್ತ್ವಗಳೆಂದರೆ ಗುರು, ಶಿಷ್ಯ ಮತ್ತು (ಗುರು ಶಿಷ್ಯನಿಗೆ ದೀಕ್ಷಾ ಸಂಸ್ಕಾರದಲ್ಲಿ ಕರುಣಿಸಿ ಕೊಡುವ) ಇಷ್ಟಲಿಂಗ. ತಮ್ಮ ಈ ವಚನ ಸಂಹಿತೆಯಲ್ಲಿ ಗುರು ಶಿಷ್ಯರಿಬ್ಬರಿಗೂ ನೀತಿಸಂಹಿತೆಯನ್ನು ನಿರೂಪಿಸಿದ್ದಾರೆ. ದೀಕ್ಷಾ ಸಂಸ್ಕಾರವನ್ನು ಪಡೆದ ಶಿಷ್ಯ ಗುರೂಪದೇಶವನ್ನು ಪಾಲಿಸಿ ಕ್ರಿಯಾಚಾರ ಸಂಪನ್ನನಾದರೆ ಅಂಥ ಶಿಷ್ಯನಿಗೂ ಗುರುವಿಗೂ ಯಾವ ಭೇದವೂ ಇಲ್ಲ. ಇಬ್ಬರೂ ಸರಿಸಮಾನರು ಎಂಬ ರಹಸ್ಯವನ್ನು ಹೇಳಿದ್ದಾರೆ (ವಚನ ೧೬೩). ೫೨೩ನೇ ವಚನದಲ್ಲಿ, "ಅಂದಿನ ಗುರುವಿನಲ್ಲಿರತಕ್ಕ ಅರ್ಹ ಗುಣಗಳನ್ನು ಕಾಣದೆ ಕಣ್ಣಿಲ್ಲದಾತ ಕಾಣಬಲ್ಲನೇ?" ಎಂದು ತಿಳಿಸುತ್ತ ಅಜ್ಞಾನಿ ಗುರುಗಳು " ತಮ್ಮ ಹಾದಿಯ ತಾವರಿಯರು; ತಾವಿನ್ನಾರಿಗೆ ಹಾದಿಯ ತೋರಿಹರಯ್ಯಾ, ಈ ಭೂಭಾರಿ ಗುರುಗಳು ಗುರು, ಗುರು ಎಂಬುವಕ್ಕೆ ನಾಚರು ನೋಡಾ.. ಪ್ರಭುವೆ ಎಂದು" ಮನನೊಂದು ನುಡಿದಿರುವುದು ಕಂಡುಬರುತ್ತದೆ.

ತಮ್ಮ ಅನೇಕ ವಚನಗಳಲ್ಲಿ ಬಸವಾದಿ ಪ್ರಮಥರನ್ನು ಸ್ಮರಿಸುತ್ತ ಬಸವಣ್ಣನೇ ಗುರು, ಚೆನ್ನಬಸವಣ್ಣನೇ ಲಿಂಗ ಪ್ರಭುದೇವರೇ ಜಂಗಮ ಎಂದು ತಿಳಿಸಿ ಈ ಬೃಹತ್ ಸಮಾಜದ ರೂವಾರಿಗಳನ್ನು ಮನಸಾರೆ ಹೊಗಳಿದ್ದಾರೆ. ಅರೆ ಭಕ್ತ, ಅರೆ ವಿದ್ಯಾವಂತ, ಅರೆ ಸಂಗೀತಗಾರರನ್ನು ಸಮಾಜದಲ್ಲಿ ಕಂಡಾಗ ವಚನ ೨೧೮ರಲ್ಲಿ "ಏನನೋದಿದರೇನಯ್ಯಾ.. ಗಿಳಿ ಓದಿ ತನ್ನ ಹೇಲ ತಾ ತಿಂದಂತೆ, ಏಕಲಿಂಗ ನಿಷ್ಠಾಚಾರ ಸ್ವಾನುಭವದ ವಿವೇಕ ಸಿದ್ಧಾಂತ ನಿರ್ಣಯವಿಲ್ಲದೆ, ಮಾತಿಗೆ ಮಾತು ಕಲಿತು ನುಡಿಗೆ ನುಡಿಯ ಕಲಿತು. . . . . ಕಂಡರೆ ಮಾಗಿಯ ಕೋಗಿಲೆಯಂತೆ ಮುಖ ಮುನಿಸಾಗಿರಿಸಯ್ಯ " ಎಂದು ತಮ್ಮ ಗುರುಗಳನ್ನು ಬಿನ್ನವಿಸಿಕೊಳ್ಳುತ್ತಾರೆ. ಶ್ರೀಗಳು ವಚನ ೬೭೮ರಲ್ಲಿ ತಾವು ಪ್ರತಿಪಾದಿಸುವ ಈ ಪಂಥದ ಬಗ್ಗೆ ಬರೆಯುತ್ತಾ "ಎಲ್ಲ ಮತಗಳಂತಲ್ಲ ಇದು, ಸ್ವರ್ಗ ಮರ್ತ್ಯ ಪಾತಾಳದೊಳಗೆ ಶರಣ ಲಿಂಗದ ಮತ ಬೇರೆ, ಈ ಶರಣ ಲಿಂಗದ ನಿಲುಗಡೆಯನ್ನು ಪರಶಿವಜ್ಞಾನಿಗಳು ಬಲ್ಲರಲ್ಲದೆ, ಪ್ರಪಂಚ ಜೀವಿಗಳು ಎಂದೂ ಅರಿಯರು" ಎಂಬ ಹೆಗ್ಗಳಿಕೆಯ ನುಡಿಗಳನ್ನಾಡುತ್ತಾರೆ.

ಭಾರತದ ಇತಿಹಾಸವನ್ನು ಓದಿದಾಗ ಅನೇಕ ಏಳಿಗೆ, ಅವನತಿಗಳು ಕಾಣಸಿಗುತ್ತವೆ. ಹನ್ನೆರಡನೆಯ ಶತಮಾನದ ರಾಜ ಬಿಜ್ಜಳನ ಸಾಮ್ರಾಜ್ಯದಲ್ಲಿ ಬಸವಾದಿ ಶರಣರು ಕಟ್ಟಿದ ಸಮಾಜ ಕಲ್ಯಾಣದ ಕ್ರಾಂತಿಯಿಂದಾಗಿ ರಾಜ ಹಾಗು ಅನೇಕ ಶರಣರ ಕೊಲೆಯಾದನಂತರ ಅಲ್ಲಿ ಅಳಿದುಳಿದ ಶರಣರು ದಿಕ್ಕೆಟ್ಟು ನಾನಾ ಕಡೆಗೆ ಓಡಿಹೋದರು. ತಾಳೆಗರಿಯಲ್ಲಿದ್ದ ಧರ್ಮ ಕಟ್ಟಳೆಗಳು ಬೆಂಕಿ, ನೀರು, ಗೆದ್ದಲಿನ ಪಾಲಾದಾಗ ಶರಣ ಸಮಾಜದಲ್ಲಿ ಅಶಾಂತಿ, ಅರಾಜಕತೆ ತಾಂಡವವಾಡಿತು. ಈ ಆಘಾತದಿಂದ ಸುಧಾರಿಸಿಕೊಳ್ಳಲು ಜನತಗೆ ಮೂರು ಶತಮಾನಗಳೇ ಬೇಕಾದವು. ಈ ಸಂಧಿಕಾಲದಲ್ಲಿ ಯತಿಗಳು ಅವತರಿಸಿ ಈ ಧರ್ಮಕ್ಕೆ ಮರುಜೀವಕೊಟ್ಟು ಅಣುವಿನಲ್ಲಿ ಅಣುವಾಗಿ, ಮಹತ್ತಿನಲ್ಲಿ ಮಹತ್ತಾಗಿ ಭಾರತಾದ್ಯಂತ ಸಂಚರಿಸಿ, ಧರ್ಮ ಪ್ರಚಾರ ಕೈಗೊಂಡರು.

ಎಲ್ಲ ಮತದ ಧರ್ಮಗುರುಗಳ ಅವತಾರದ ಉದ್ದೇಶ, ಭವಚಕ್ರದಲ್ಲಿ ಸಿಕ್ಕಿ ಪರಿತಪಿಸುತ್ತಿರುವ ಜೀವಾತ್ಮರನ್ನು ಭವ ಬಂಧನದಿಂದ ಬಿಡಿಸಿ ಮುಕ್ತಿ ದೊರಕಿಸಿಕೊಡುವುದೇ ಆಗಿರುತ್ತದೆ. ಮಾನವರಿಗೆ ಅನೇಕ ಮತಗಳಿರುವುದು ಸ್ವರ್ಗಕ್ಕೆ ಅನೇಕ ಬಾಗಿಲುಗಳಿದ್ದಂತೆ ಎಂದು ಶ್ರೀರಾಮಕೃಷ್ಣ ಪರಮಹಂಸರು ಹೇಳಿದ್ದಾರೆ. ಅದರಂತೆ ಶ್ರೀಗಳ ಅವತಾರದ ಉದ್ದೇಶವೂ ಸಹ ಅದೇ ಆಗಿತ್ತು.

ಒಟ್ಟಾರೆ ಶ್ರೀಗಳ 'ಷಟ್‌ಸ್ಥಲಜ್ಞಾನ ಸಾರಾಮೃತ'ವು ಭಾರತ ದೇಶದ ಒಂದು ಅಮೂಲ್ಯ ತತ್ತ್ವಗ್ರಂಥ. ಇಲ್ಲಿರುವ ಅಧ್ಯಾತ್ಮ ರಹಸ್ಯಗಳು ಓದುಗರ ಜ್ಞಾನಚಕ್ಷುಗಳನ್ನು ತೆರೆಸುತ್ತವೆ. ವೀರಶೈವ ಪಂಥೀಯರಿಗೆ ಇದು ಆಧಾರ ಗ್ರಂಥ. ಇದು ವೀರಶೈವ ಸಂತರು ತಮ್ಮ ಮಠಗಳಲ್ಲಿ ಪ್ರತಿದಿನವೂ ಪಾರಾಯಣ ಮಾಡಬೇಕಾದ ಗ್ರಂಥ. ಹೇರಂಬ ಕವಿಯ ಸಾಂಗತ್ಯ ಕಾವ್ಯದ ಗದ್ಯಾನುವಾದ (ರಾಜಶೇಖರ ಶಾಸ್ತ್ರಿ, ನೆಲಮಂಗಲ) ಪುಟ ೧೧೫ರಲ್ಲಿ "ಈ ವಿದ್ಯೆಯನ್ನು ಅಚಲಿತರಾಗಿ ಸದ್ಭಕ್ತಿಯಿಂದ ನಿರ್ಮಲ ಮನಸ್ಸಿನಿಂದ ತಿಳಿದುಕೊಂಡು ಆಚರಿಸಿ ಅನುಷ್ಠಾನಕ್ಕೆ ತಂದ ವೀರಶೈವ ಸದ್ಭಕ್ತನು ಸನ್ಯಾಸಿಗಳಿಗಿಂತಲೂ ದೊಡ್ಡವನು" ಎಂದು ನಮೂದಿಸಲಾಗಿದೆ. ನಾನು ಬಾಲಕನಾಗಿದ್ದಾಗ ಎಡೆಯೂರು ಕ್ಷೇತ್ರಕ್ಕೆ ಭೇಟಿಕೊಟ್ಟಿದ್ದ ಸಂದರ್ಭದಲ್ಲಿ ಭಕ್ತನೊಬ್ಬನು, "ಎಡೆಯೂರಿಗಿನ್ನ ಮಿಗಿಲಾದ ಕ್ಷೇತ್ರವಿಲ್ಲ, ಶ್ರೀಗುರುಸಿದ್ಧಲಿಂಗೇಶ್ವರಿಗಿನ್ನ ಮಿಗಿಲಾದ ಗುರುವಿಲ್ಲ, ಷಟ್‌ಸ್ಥಲ ಜ್ಞಾನಸಾರಾಮೃತಕ್ಕಿನ್ನ ಮಿಗಿಲಾದ ಗ್ರಂಥವಿಲ್ಲ" ಎಂದು ಹೇಳಿದ್ದರು. ಅದು ಸತ್ಯವೆಂದು ನನಗೀಗ ತೋರುತ್ತದೆ.

ಆಶ್ರಮದ ವಿಶೇಷ ಕಾರ್ಯಕ್ರಮಗಳು

**ಆಗಸ್ಟ್ 2007**

| | | |
|---|---|---|
| **10** | **ಶುಕ್ರವಾರ** | ಸ್ವಾಮಿ ರಾಮಕೃಷ್ಣಾನಂದ ಜಯಂತಿ |
| **28** | **ಮಂಗಳವಾರ** | ಸ್ವಾಮಿ ನಿರಂಜನಾನಂದ ಜಯಂತಿ |